ಇಂಡಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆ

1483 - ಶ್ರೀ ರವಿಕಾಂತ್ ಎಸ್. ಪಾಟೀಲ್ (ಇಂಡಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ತಾಲ್ಲೂಕಿಗೆ ಕುಡಿಯುವ ನೀರಿನ ಯೋಜನೆ ಮಂಜೂರಾಗಿದ್ದು ಹಣವನ್ನು ಬಿಡುಗಡೆ ಮಾಡಿರುವ ವಿಷಯ ನಿಜವೇ?

ಆ0 ಹಾಗಿದ್ದಲ್ಲಿ. ಇದುವರೆಗೆ ಯೋಜನೆ ಪ್ರಾರಂಭಿಸದಿರಲು ಕಾರಣಗಳೇನು ಹಾಗೂ ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಇಂಡಿ ತಾಲ್ಲೂಕಿನ ಗ್ರಾಮೀಣ ನೀರು ಪೂರೈಕೆ ಯೋಜನೆಗಳಿಗಾಗಿ 1996-97ನೇ ಸಾಲಿನಲ್ಲಿ ಒಟ್ಟು ರೂ. 65.63 ಲಕ್ಷಗಳನ್ನು (ನಿರ್ವಹಣೆ ಹೊರತುಪಡಿಸಿ) ಒದಗಿಸಿದ್ದು, ಹಣವನ್ನು ಹಂತಹಂತವಾಗಿ ಬಿಡುಗಡೆ ಮಾಡಲಾಗುತ್ತಿದೆ.

ಆ) 1996-97ನೇ ಸಾಲಿನಲ್ಲಿ ಇಂಡಿ ತಾಲ್ಲೂಕಿನ ಗ್ರಾಮೀಣ ನೀರು ಸರಬರಾಜು ಯೋಜನೆಗಳ ಅನುಷ್ಠಾನವನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯಡಿಯಲ್ಲಿ ಒಟ್ಟು 111 ಕಾಮಗಾರಿಗಳನ್ನು ಹಮ್ಮಿಕ್ಕೊಂಡಿದ್ದು ಅವುಗಳಲ್ಲಿ 17 ಮುಂದುವರೆದ ಕಾಮಗಾರಿಗಳಿದ್ದು, 94 ಹೊಸ ಕಾಮಗಾರಿಗಳಿರುತ್ತವೆ. ಈಗಾಗಲೇ ಕಾಮಗಾರಿಗಳು ಆರಂಭವಾಗಿದ್ದು ಜೂನ್ 96ರ ಅಂತ್ಯದವರೆಗೆ ಒಟ್ಟು 24.03 ಲಕ್ಷ ವೆಚ್ಚವಾಗಿರುತ್ತದೆ.

ರಾಜಾರಾಮ್ ಮೋಹನ ರಾಯರ ಯೋಜನೆಯಡಿಯಲ್ಲಿ ಪುಸ್ತಕಗಳ ಖರೀದಿ

2311 - ಶ್ರೀ ಸಯದ್ ಜುಲ್ಫೀಕರ್ ಹಶ್ಮಿ : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ರಾಜಾರಾಮ್ ಮೋಹನರಾಯ್ ಯೋಜನೆಯಡಿಯಲ್ಲಿ ಎಷ್ಟು ಪುಸ್ತಕಗಳನ್ನು ಖರೀದಿ ಮಾಡಲು ಅನುದಾನ ಮಂಜೂರು ಮಾಡಲಾಗಿದೆ.

ಆ) ಉರ್ದು ಭಾಷೆಯನ್ನು ಎರಡನೇ ಭಾಷೆಯನ್ನಾಗಿ ಮಾತನಾಡಲು ಬಳಸಬಹುದೇ ಅಥವಾ 15 ರಷ್ಟಾದರೂ ಉರ್ದು ಮಾಧ್ಯಮದಲ್ಲಿ ವ್ಯವಹರಿಸಲು ಮುಂದಿನ ಸಾಲಿನಲ್ಲಾದರೂ ಅವಕಾಶ ಮಾಡಿಕೊಡಲಾಗುವುದೇ? (ಈ ಪ್ರಶ್ನೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಿಸಿದ್ದು ಅವರಿಂದ ಉತ್ತರಿಸಿ ಒಪ್ಪಿಸಿದೆ)

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು):

ಅ) ರೂ. 10.00 ಲಕ್ಷಗಳು

ಆ) ಕನ್ನಡವು ರಾಜ್ಯದ ರಾಜ್ಯ ಭಾಷೆಯಾಗಿರುವುದರಿಂದ ಕನ್ನಡದಲ್ಲಿ ಮಾತನಾಡುವುದು ಉಚಿತ. ಶೇ. 15 ರಷ್ಟು ಉರ್ದು ಮಾಧ್ಯಮದಲ್ಲಿ ವ್ಯವಹರಿಸಲು ಅವಕಾಶ ಮಾಡಿಕೊಡುವ ಬಗ್ಗೆ ಕರ್ನಾಟಕ ರಾಜ್ಯ ಭಾಷಾ ಅಧಿನಿಯಮ 1963ರ ಪ್ರಕಾರ ಕನ್ನಡವು ಕರ್ನಾಟಕ ರಾಜ್ಯದ ರಾಜಭಾಷೆಯಾಗಿರುತ್ತದೆ ರಾಜ್ಯದ ಆಡಳಿತ ಭಾಷೆಯು ಕನ್ನಡವಾಗಿದ್ದು ವ್ಯವಹರಣೆಯನ್ನು ಕನ್ನಡದಲ್ಲಿ ಮಾಡಬೇಕಿರುತ್ತದೆ.

ಪ್ರತಿ ತಾಲ್ಲೂಕಿನಲ್ಲಿ ನೂರು ಬಾವಿ ಯೋಜನೆ.

2653 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?